## ಅಂಗಡಿಗೆ ಹೋಗಿದ್ದಾಳೆ



ಇದು ಕಳೆದ ವರ್ಷ ನಡೆದ ಘಟನೆ. ಚಿಕ್ಕಮಗಳೂರಿನಲ್ಲಿರುವ ಅಕ್ಕನ ಮನೆಗೆ ಹೋಗಿದ್ದೆ. ಹಾಗೆಯೇ ಅಲ್ಲೇ ಇದ್ದ ಗೆಳತಿ ಸುಧಾಳ ಮನೆಗೆ ಹೋಗುವುದೆಂದು ತೀರ್ಮಾನಿಸಿ ಅವಳಿಗೆ ಫೋನ್ ಮಾಡಿದೆ. ಅವಳು, 'ನಾನು ಅಂಗಡಿಗೆ ಬಂದಿದ್ದೀನಿ ಕಣೆ' ಎಂದಳು. ಸರಿ, ಸಂಜೆಯ ಹೊತ್ತಿಗೆ ಮನೆಗೆ ಬಂದಿರುತ್ತಾಳೆ. ಸಂಜೆಯೇ ಹೋದರಾಯಿತು ಎಂದುಕೊಂಡು ಸುಮ್ಮನಾದೆ. ಸಂಜೆ ಅವಳ ಮನೆಗೆ ಹೋದೆ. ಸುಧಾಳ ಅತ್ತೆ, ಮಾವ ನನ್ನನ್ನು ಉಪಚರಿಸಿದರು. ಎಷ್ಟು ಹೊತ್ತಾದರೂ ಸುಧಾ ಹೊರಗೆ ಬರದೇ ಇದ್ದಾಗ, 'ಸುಧಾ ಇನ್ನೂ ಬಂದಿಲ್ಲವೆ?' ಎಂದು ಕೇಳಿದೆ. 'ಇಲ್ಲಮ್ಮ, ಅವಳು ಅಂಗಡಿಗೆ ಹೋಗಿದ್ದಾಳೆ' ಎಂದರು. 'ಬೆಳಗ್ಗೆಯೇ ಹೋಗಿದ್ದಾಳಲ್ಲ, ಇನ್ನೂ ಬಂದಿಲ್ಲವೆ? ಅಷ್ಟೊಂದು ಖರೀದಿ ಮಾಡುವುದು ಇದೆಯೇ?' ಎಂದು ಕೇಳಿದೆ. ಅವರು ನಗುತ್ತಾ, 'ಆ ಅಂಗಡಿ ಅಲ್ಲಮ್ಮ, ಮೂಡಿಗೆರೆ ತಾಲ್ಲೂಕಿನಲ್ಲಿ ಅಂಗಡಿ ಅಂತ ಊರಿದೆ. ಅಲ್ಲಿ ಅವಳ ಚಿಕ್ಕಪ್ಪನ ಮಗಳು ಇರ್ತಾಳೆ. ಅಲ್ಲಿಗೆ ಹೋಗಿದ್ದಾಳೆ' ಎಂದಾಗ ಪೆದ್ದು ಪೆದ್ದಾಗಿ ನಕ್ಕೆ.

**ಸು. ವಿಜಯಲಕ್ಷ್ಮಿ**

---



ಕಲೆ: ಗಣೇಶ ಆಚಾರ್ಯ

## ಕ್ಲಾಸಿಗೆ ಸೇರಿಸಬೇಕು

ತನ್ಮಯತೆಯಿಂದ ಚಿತ್ರ ಬಿಡಿಸುತ್ತಿದ್ದ ನಾಲ್ಕು ವರ್ಷದ ಮಗಳು ಅಪೂರ್ವಳನ್ನು ನೋಡಿ ಗೆಳತಿ ಪದ್ಮಿನಿ ಹೇಳಿದಳು, 'ತುಂಬಾ ಚೆನ್ನಾಗಿ ಡ್ರಾಯಿಂಗ್ ಮಾಡ್ತೀಯ, ನಿನ್ನ ಡ್ರಾಯಿಂಗ್ ಕ್ಲಾಸಿಗೆ ಸೇರಿಸಬೇಕು.' ಕೆಲವು ದಿನಗಳ ಬಳಿಕ ಪದ್ಮಿನಿಯ ಚಿಕ್ಕಮ್ಮ ಚಿಕ್ಕಪ್ಪ ಊರಿಂದ ಬಂದರು. ರಾತ್ರಿ ಊಟ ಮಾಡುವಾಗ ಚಿಕ್ಕಮ್ಮ ಹೇಳುತ್ತಿದ್ದರು, 'ತುಂಬಾ ಚೆನ್ನಾಗಿ ಅಡುಗೆ ಮಾಡಿದ್ದೀಯ ಕಣೆ' ಎಂದು. 'ಹೌದು ಮಮ್ಮಿ, ಚೆನ್ನಾಗಿ ಅಡುಗೆ ಮಾಡ್ತೀಯ, ನಿನ್ನ ಅಡುಗೆ ಕ್ಲಾಸಿಗೆ ಸೇರಿಸಬೇಕು' ಎಂದಳು ಅಪೂರ್ವ!

**ಸುಶೀಲಾ ರಾವ್**